ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೋಂದಾವಣಿ ಶುಲ್ಕವನ್ನು ರದ್ದುಗೊಳಿಸುವುದು

2435 (3237) : ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ವಿನಿಮಯ ಕಛೇರಿಗಳ ಸಂಖ್ಯೆ ಎಷ್ಟು; ಈ ಕಛೇರಿಗಳಲ್ಲಿ ಉದ್ಯೋಗಕ್ಕಾಗಿ ನೋಂದಾವಣಿ ಮಾಡಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು;

ಆ) 2000–01, 2002 ಹಾಗೂ 2003ನೇ ಸಾಲಿನವರೆವಿಗೂ ಎಷ್ಟು ಮಂದಿ ನಿರುದ್ಯೋಗಿ ಯುವಕರಿಗೆ ಉದ್ಯೋಗವನ್ನು ಕಲ್ಪಿಸಿಕೊಡಲಾಗಿದೆ;

ಇ) ನಿರುದ್ಯೋಗಿ ಯುವಕರು ಉದ್ಯೋಗಕ್ಕಾಗಿ ಈಗ ನೋಂದಾವಣಿ ಮಾಡಿಕೊಳ್ಳಲು ಶುಲ್ಕ ವಿಧಿಸಿರುವುದು ನಿಜವೇ; ಹಾಗಿದ್ದರೆ, ಹೆಸರು, ನೋಂದಾವಣಿಗೆ ವಿಧಿಸಿರುವ ಶುಲ್ಕವೆಷ್ಟು;

ಈ) ಇದರಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು; ಈ ಆದಾಯವನ್ನು ಯಾವ ಕಾರ್ಯಕ್ಕೆ ವಿನಿಯೋಗಿಸಲಾಗುವುದು;

ಉ) ಉದ್ಯೋಗಕ್ಕಾಗಿ ಹೆಸರು ನೋಂದಾವಣಿಯ ಶುಲ್ಕವನ್ನು ರದ್ದುಪಡಿಸಿ, ನಿರುದ್ಯೋಗಿ ಯುವಕರಿಗೆ ಉದ್ಯೋಗ ಕಲ್ಪಿಸಿಕೊಡುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು):

ಅ) ರಾಜ್ಯದಲ್ಲಿ 34 ಉದ್ಯೋಗ ವಿನಿಮಯ ಕೇಂದ್ರಗಳಿವೆ.

ಮೇ 2003ರ ಅಂತ್ಯಕ್ಕೆ 18,65,943 ಅಭ್ಯರ್ಥಿಗಳು.

ಆ) 14,338 ಅಭ್ಯರ್ಥಿಗಳು ಉದ್ಯೋಗ ವಿನಿಮಯ ಕೇಂದ್ರಗಳಿಂದ ಉದ್ಯೋಗ ಪಡೆದಿರುತ್ತಾರೆ. ವರ್ಷವಾರು ವಿವರ ಈ ಕೆಳಗಿನಂತಿದೆ:–

ವರ್ಷ (ಆರ್ಥಿಕ ವರ್ಷ)	ಉದ್ಯೋಗ ಪಡೆದವರ ಸಂಖ್ಯೆ
2000–2001	6,784
2001–2002	3,474
2002–2003	4,080
ಒಟ್ಟು	**14,338**

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆಯನ್ವಯ ಇರತಕ್ಕ ಅಕ್ರಮ ಸಾಗುವಳಿದಾರರು

2436 (3081) : ಶ್ರೀ ಗೋಪಾಲ ಬಂಡಾರಿ ಎಚ್. (ಕಾರ್ಕಳ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರಣ್ಯ ಸಂರಕ್ಷಣಾ ಕಾಯಿದೆಯನ್ವಯ 1978ರ ಮೊದಲಿದ್ದ ಅಕ್ರಮ ಸಾಗೋಳಿದಾರರನ್ನು ಗುರುತಿಸಲಾಗಿದೆಯೇ;